**ಓ ಎಸ್ 24/2023 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 19.01.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ**

ನಮ್ಮ ತಂದೆಗೆ ನಾವು 3 ಜನ ಮಕ್ಕಳು. ಈ ದಾವೆ ಹೂಡಿದ ನಂತರ ನನ್ನ ತಾಯಿ ಕಮಲರವರು ಮೃತಪಟ್ಟರು ಎಂದರೆ ಸರಿ. ನಮ್ಮ ತಂದೆಯು ದಿನಾಂಕ 30.05.2021 ರಲ್ಲಿ ಮೃತಪಟ್ಟರು. ನಮ್ಮ ತಂದೆ ಅನಾರೋಗ್ಯ ತಪ್ಪಿ ಕರೋನಾ ಖಾಯಿಲೆಯಿಂದ ಮೃತಪಟ್ಟರು ಎಂದರೆ ಸರಿ. ನಮ್ಮ ತಂದೆಗೆ ಮೊದಲು ಮಗ ಆನಂತರ ಹೆಣ್ಣು ಮಕ್ಕಳು. ನಾನು ಬೆಂಗಳೂರಿಗೆ ಮದುವೆಯಾಗಿದ್ದೇನೆ. ನನ್ನ ಅಕ್ಕ ಮೈಸೂರಿಗೆ ಮದುವೆಯಾಗಿದ್ದಾರೆ. ದಾವಾ ಆಸ್ತಿ ನಮ್ಮ ತಂದೆಯ ಸ್ವಯಾರ್ಜಿತ ಎಂದರೆ ಸರಿ. ದಾವಾ ಆಸ್ತಿಯ ಪೋಡು ಮತ್ತು ಅಳತೆ ವ್ಯಾತ್ಯಾಸ ಇದೆ ಎಂದು ನಮ್ಮ ತಂದೆ ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಸರಿಪಡಿಸುವಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ನಮ್ಮ ತಂದೆ ತೀರಿಕೊಂಡ ನಂತರ ನಾನು, ನನ್ನ ತಾಯಿ ಹಾಗೂ ನನ್ನ ಒಡಹುಟ್ಟಿದವರು ಎಲ್ಲರೂ ಮಂಡ್ಯದ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಮುಂದೆ ಪ್ರಕರಣವನ್ನು ಮುಂದುವರಿಸಿ ಅದು ಇತ್ಯರ್ಥಗೊಂಡಿದೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಯು ಸದರಿ ಆದೇಶವಾಗಿದೆ ಎಂದರೆ ಸರಿ. ಅದನ್ನು ನಿಶಾನೆ ಪಿ 9 ಎಂದು ನಿಶಾನಿಸಲಾಯಿತು. ಸದರಿ ಆದೇಶದ ಅನುಸಾರ ನನ್ನ ತಂದೆ ಹೆಸರಿಗೆ ಆರ್ ಟಿ ಸಿ ತಿದ್ದುಪಡಿ ಮಾಡಿದ್ದಾರೆ ಎಂದರೆ ಸರಿ. ಈಗ ನನಗೆ ತೋರಿಸಿದ ಆರ್ ಟಿ ಸಿ ಯು ಸದರಿ ಒಟ್ಟುಗೂಡಿಸಿದ ಆರ್ ಟಿ ಸಿ ಮತ್ತು ಎಂ ಆರ್ ಆಗಿದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಿಶಾನೆ ಪಿ 10 ಮತ್ತು 11 ಎಂದು ನಿಶಾನಿಸಲಾಯಿತು. ಈಗ ತಿದ್ದುಪಡಿ ಅನುಸಾರ ದಾವಾ ಷೆಡ್ಯೂಲ್ ಸರ್ವೆ ನಂಬರು ಸ್ವತ್ತು ಸರ್ವೆ ನಂ. 43/2 ಎಂದು ತಿದ್ದುಪಡಿಯಾಗಿದೆ ಎಂದರೆ ಸರಿ.

ದಾವಾ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶದಿಂದ ನಮ್ಮ ತಂದೆಯು

ವಾದಿಗೆ ದಿನಾಂಕ 24.02.2018 ರಂದು ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪೋಡು ಮತ್ತು ದುರಸ್ತಿ ಮಾಡಿಸಿಕೊಂಡು ಆನಂತರ ಕ್ರಯಪತ್ರ ಬರೆದುಕೊಡುವುದಾಗಿ ಹೇಳಿ ನನ್ನ ತಂದೆಯು ವಾದಿಯ ಹೆಸರಿಗೆ ದಿನಾಂಕ 19.09.2019 ರಂದು ಪೂರಕ ಕ್ರಯದ ಕರಾರು ಪತ್ರ ಮಾಡಿಕೊಟ್ಟರು ಎಂದರೆ ಸರಿಯಲ್ಲ. ನಮಗೆ ವಕೀಲರಿಂದ ನೋಟೀಸು ಬಂದ ನಂತರ ಕ್ರಯದ ಕರಾರು ಪತ್ರಗಳ ಬಗ್ಗೆ ಗೊತ್ತಾಯಿತು. ಡಿ ಡಿ ಎಲ್ ಆರ್ ರವರ ಕಚೇರಿಯಲ್ಲಿ ಪ್ರಕರಣ ಇತ್ಯರ್ಥ ಆಗುವುದಕ್ಕೆ ಮೊದಲೇ ನಮ್ಮ ತಂದೆ ದಿನಾಂಕ 30.05.2021 ರಂದು ಮೃತರಾದರು ಎಂದರೆ ಸರಿ. ಪೋಡಿ ದುರಸ್ತಿ ಆದ ನಂತರ ವಾದಿಯು ನಮ್ಮನ್ನು ಭೇಟಿಯಾಗಿ ನಮ್ಮ ತಂದೆಯು ಪೋಡಿ ದುರಸ್ತಿ ಕಾರ್ಯ ಮುಗಿದ ನಂತರ ಕ್ರಯಪತ್ರವನ್ನು ಬರೆದುಕೊಡುವುದಾಗಿ ಹೇಳಿದ ಸಂಗತಿಯನ್ನು ನಮಗೆ ಹಲವಾರು ಬಾರಿ ಹೇಳಿ ಕ್ರಯಪತ್ರ ಬರೆದುಕೊಡುವಂತೆ ಕೇಳಿದರು ಎಂದರೆ ಸರಿಯಲ್ಲ. ಹಾಗೆ ಕೇಳಿದಾಗಲೆಲ್ಲಾ ನಾವು ಕ್ರಯಪತ್ರವನ್ನು ಬರೆದುಕೊಡುವುದಾಗಿ ಭರವಸೆ ನೀಡಿ ಕಾಲಾವಕಾಶ ಕೇಳಿದ್ದೆವು ಎಂದರೆ ಸರಿಯಲ್ಲ. ಹಾಗೆ ಕಾಲಾವಕಾಶ ಪಡೆದುಕೊಂಡು ಕ್ರಯಪತ್ರ ಬರೆದುಕೊಡದೆ ಕಾಲಹರಣ ಮಾಡಿದ ಕಾರಣ ದಿನಾಂಕ 13.03.2023 ರಂದು ವಾದಿಯು ನಮಗ ವಕೀಲರ ಮೂಲಕ ನೋಟೀಸು ನೀಡಿದ್ದಾರೆ ಎಂದರೆ ನಮಗೆ ನೋಟೀಸು ಬಂದಾಗ ಗೊತ್ತಾಯಿತು, ನಾವು ಕ್ರಯಪತ್ರ ಬರೆದುಕೊಡುತ್ತೇವೆ ಎಂದು ಹೇಳಿರಲಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ವಾದಿಗೆ ಕ್ರಯಪತ್ರವನ್ನು ಬರೆದುಕೊಡುವುದಾಗಿ ಹೇಳಿ ನಮ್ಮ ತಂದೆಯು ಮೃತರಾಗಿರುವ ಕಾರಣ ನಾವು ನಮ್ಮ ತಂದೆಯ ವಾರಸುದಾರರಾಗಿ ವಾದಿಗೆ ಕ್ರಯಪತ್ರವನ್ನು ಬರೆದುಕೊಡುವ ಭಾಧ್ಯತೆ ನಮ್ಮ ಮೇಲೆ ಇದೆ ಎಂದರೆ ಸರಿಯಲ್ಲ. ಈ ದಾವೆ ಹೂಡಿದ ನಂತರ ಈ ದಾವಾ ಆಸ್ತಿಯನ್ನು ಸೇರಿಸಿ ಭಾಗಾಂಶ ಕೋರಿ ಮಾನ್ಯ ಸಿವಿಲ್ ಮತ್ತು ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಿಭಾಗ ಹೂಡಿದ್ದೇವೆ ಎಂದರೆ ಭಾಗಕ್ಕಾಗಿ ಮೊದಲೇ ದಾವೆ ಹೂಡಿದ್ದೆ. 2022 ರಲ್ಲಿ ದಾವೆ ಹೂಡಿದ್ದೇನೆ. ದಾವಾ

ಆಸ್ತಿಯು ಪ್ರಸ್ತುತ ತಿದ್ದುಪಡಗೊಂಡು ಒಟ್ಟುಗೂಡಿಸಿದ ನಂತರ ಬಂದಿರುವ ಆರ್ ಟಿ ಸಿ ಸ.ನಂ. 43/2 ರಲ್ಲಿ 0.36 ವರೆ ಗುಂಟೆ ಪೈಕಿ ದಾವಾ ಷೆಡ್ಯೂಲ್ ಚಕ್ಕುಬಂದಿ ಅನುಸಾರ 0.10 ಗುಂಟೆ ಜಮೀನನ್ನು ನಾನು ಮತ್ತು ನನ್ನ ಒಡಹುಟ್ಟಿದವರು ವಾದಿಗೆ ಕ್ರಯಪತ್ರದ ಮೂಲಕ ಬರೆದುಕೊಡಲು ಬಾಧ್ಯಸ್ಥರು ಎಂದರೆ ಸರಿಯಲ್ಲ. ನಮ್ಮ ತಂದೆ ವಾದಿಗೆ ಆರ್ ಟಿ ಜಿ ಎಸ್ ಮೂಲಕ ಹಣ ನೀಡಿ ದಾವಾ ಆಸ್ತಿಗೆ ಸಂಬಂಧಿಸಿದ ಕ್ರಯದ ಕರಾರು ಪತ್ರ ಬರೆಸಿಕೊಂಡಿದ್ದಾರೆ ಎಂದರೆ ನಮ್ಮ ತಂದೆಯು ವೈಯಕ್ತಿಕ ಸಾಲ ಪಡೆದುಕೊಂಡಿದ್ದಾರೆ. ನಮ್ಮ ತಂದೆಯು ವಾದಿಯಿಂದ ಆರ್ ಟಿ ಜಿ ಎಸ್ ಮೂಲಕ ವೈಯಕ್ತಿಕವಾಗಿ ಸಾಲ ಪಡೆದುಕೊಂಡಿದ್ದಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ಹೇಳಿದ್ದೇನೆ. ನಮ್ಮ ತಂದೆಯು ದಿನಾಂಕ 24.02.2018 ರಂದು ಕ್ರಯದ ಕರಾರು ಪತ್ರ ಹಾಗೂ ದಿನಾಂಕ 19.09.2019 ರಂದು ಕ್ರಯದ ಕರಾರಿನ ಪೂರಕ ಪತ್ರವನ್ನು ವಾದಿಗೆ ಬರೆದುಕೊಟ್ಟಿದ್ದಾರೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ, ಆದರೆ ನಮ್ಮ ತಂದೆ ಬದುಕಿದ್ದಾಗ ಯಾವುದೇ ನೋಟೀಸು ಬಂದಿಲ್ಲದ ಕಾರಣ ಕಾಲಪರಿಮಿತಿಯಿಂದ ಬಾಧಿತವಾಗಿದೆ ಎಂದು ಹೇಳಿದ್ದೇನೆ. ವಾದಿಗೆ ತೊಂದರೆ ಕೊಡಬೇಕೆಂಬ ದುರುದ್ದೇಶದಿಂದ ನಾವು ಕುಟುಂಬದವರೆಲ್ಲರೂ ಒಬ್ಬರಿಗೊಬ್ಬರು ಸೇರಿ ಷರೀಕ್ಕಾಗಿ ಕೇಸುಗಳನ್ನು ಹಾಕುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**

**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**

**ಪಾಂಡವಪುರ**